ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್.ಸಿ.ನಂ.**295/2025**

| | | |
|---|---|---|
| ಪಿರ್ಯಾದುದಾರರು | : | ಸರ್ಕಾರದ ಪರ ಸೋಲದೇವನಹಳ್ಳಿ ಪೊಲೀಸರು |
| | | - ವಿರುದ್ಧ - |
| ಆರೋಪಿ | : | ಲಕ್ಷ್ಮೀಪತಿ ಎನ್ @ ಸಣ್ಣ<br>ತಂದೆ: ನರಸಯ್ಯ,<br>ವಯಸ್ಸು 35 ವರ್ಷ<br>ವಾಸ: ಏಕಾಂಗಿ ಹೋಟೇಲ್ ಮುಂಭಾಗ,<br>ಹೆಸರಘಟ್ಟ, ಬೆಂಗಳೂರು ನಗರ.<br>ಸ್ವಂತ ವಾಸ: ಚಿಕ್ಕಮಂಕನಾಳ ಗ್ರಾಮ,<br>ಕೊಳಿಗೆರೆ ಪೋಸ್ಟ್, ದೊಡ್ಡಬಳ್ಳಾಪುರ ತಾಲ್ಲೂಕು,<br>ಬೆಂಗಳೂರು ಜಿಲ್ಲೆ. |

ದೋಷಾರೋಪಣೆ

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಲಕ್ಷ್ಮೀಪತಿ ಎನ್ @ ಸಣ್ಣ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

1 ನೇ ಆರೋಪಿಯಾದ ನೀನು ಚಾಸಾ. 5 ರವರು ಗಂಡನಾಗಿದ್ದು, 1 ನೇ ಆರೋಪಿಯಾದ ನೀನು ಚಾಸಾ. 1 ಹಾಗೂ ಚಾಸಾ. 5ರ ನಡುವೆ ಅಕ್ರಮ ಸಂಬಂಧವಿದೆ ಎಂದು ತಪ್ಪು ತಿಳಿದುಕೊಂಡು, ಚಾಸಾ. 01 ರವರನ್ನು ಕೊಲೆ ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದು ದಿನಾಂಕ 27.07.2025 ರಂದು ಬೆಳಗ್ಗೆ 08-55 ಗಂಟೆಗೆ ಬೆಂಗಳೂರು ನಗರ, ಹೆಸರಘಟ್ಟ, ಹೆಸರಘಟ್ಟ ಮೇನ್ ರೋಡ್ ನಲ್ಲಿರುವ ಎಮ್.ಎಮ್. & ಕೋ, ಪದ್ಮಾವತಿ ಜ್ಯುವೆಲ್ಲರ್ಸ್ ರವರ ನಿರ್ಮಾಣ ಹಂತದ ಶಾಪ್ ನ ಮುಂಭಾಗದ ರಸ್ತೆಯಲ್ಲಿ ಚಾಸಾ. 1, ಚಾಸಾ. 2 ಹಾಗೂ

ಚಾಸಾ. 3 ರವರು ನಿಂತುಕೊಂಡು ಮಾತನಾಡುತ್ತಿರಬೇಕಾದರೆ ಆರೋಪಿಯಾದ ನೀನು ಅದೇ ಸಮಯಕ್ಕೆ ಚಾಸಾ. 1, 2 ಹಾಗೂ 3 ರವರು ನಿಂತುಕೊಂಡಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿರುವ ಅಯ್ಯಂಗಾರ್ ಬೇಕರಿ ಬಳಿ ಹೋಗಿ ಚಾಸಾ. 1 ರವರನ್ನು ನೋಡಿ, ಚಾಸಾ. 1 ರವರನ್ನು ಕೊಲೆ ಮಾಡಲು ಸರಿಯಾದ ಸಮಯವೆಂದು ತಿಳಿದುಕೊಂಡು, ಚಾಸಾ. 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಸಾ. 1, 2 ಹಾಗೂ 3 ರವರಿದ್ದ ಸ್ಥಳಕ್ಕೆ ಹೋಗಿ ನಿನ್ನ ಬಳಿ ಇದ್ದ ರೇಜರ್ ಚಾಕುವಿನಿಂದ ಏಕಾಏಕಿ ಚಾಸಾ. 1 ರವರ ಕತ್ತಿಗೆ ಹೊಡೆದು ರಕ್ತಗಾಯಪಡಿಸಿ ಕೊಲೆಗೆ ಯತ್ನಿಸಿದ್ದು, ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 109 ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ 15 ನೇ ಡಿಸೆಂಬರ್, 2025)

**(ಶ್ರೀಮತಿ ಬಿ.ಎಸ್.ರೇಖಾ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.